ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Thursday the 13th May 1976/Vaishakha 23, 1898 SE.

The House met in the Assembly Chamber, Vidhana Soudha, at One of the clock.

[MADAM SPEAKER (SMT. K. S. NAGARATHNAMMA) in the Chair.]

STARRED QUESTIONS
(to which oral answers were given)

ತುಮಕೂರಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು

635. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಸರಕಾರದ ಕೈಗಾರಿಕಾ ವಿಕೇಂದ್ರೀಕರಣದ ನೀತಿಗನುಗುಣವಾಗಿ ಜಿಲ್ಲಾ ಕೇಂದ್ರವಾದ ತುಮಕೂರಿನಲ್ಲಿ ಹಾಗೂ ತುಮಕೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಸರಕಾರ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಸರಕಾರವು ಪ್ರಾರಂಭಿಸಿರುವ ಕೈಗಾರಿಕೆಗಳಾವುವು;

(ಆ) ಪ್ರಾರಂಭಿಸಬೇಕೆಂದಿರುವ ಕೈಗಾರಿಕೆಗಳಾವುವು;

(ಇ) ಇವುಗಳಿಗೆ ಹೂಡಿರುವ ಬಂಡವಾಳವೆಷ್ಟು;

(ಈ) ತುಮಕೂರಿನಲ್ಲಿ ಸೈಕಲ್ ತಯಾರಿಸುವ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದ್ದುದು ನಿಜವೇ;

(ಉ) ಹಾಗಿದ್ದರೆ ಈ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಸಣ್ಣ ಪ್ರಮಾಣದ ಕೈಗಾರಿಕಾ ಶಾಖೆಯ ರಾಜ್ಯ ಮಂತ್ರಿಗಳು).— ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳ ಪರವಾಗಿ).—

(ಅ) ತುಮಕೂರಿನಲ್ಲಿಯಾಗಲಿ ಅಥವಾ ಜಿಲ್ಲೆಯಲ್ಲಾಗಲಿ ಸಾರ್ವಜನಿಕ ಕ್ಷೇತ್ರದಲ್ಲಿ ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರಲ್ಲಿ ಸದ್ಯಕ್ಕೆ ಯಾವ ಸಲಹೆಗಳು ಇರುವುದಿಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಇಲ್ಲ.

(ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ತಾವು ಪಬ್ಲಿಕ್ ಸೆಕ್ಟಾರಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಹಾಗೂ ಇತರ ತಾಲ್ಲೂಕುಗಳಲ್ಲಿ ಇಂಡಸ್ಟ್ರೀಸ್‌ನ್ನು ಪ್ರಾರಂಭ ಮಾಡುವಂತಹ ಯೋಜನೆಯನ್ನು ಸಧ್ಯಕ್ಕೆ ಇಟ್ಟು ಕೊಂಡಿಲ್ಲ ಎಂದು ತಿಳಿಸಿದ್ದೀರಿ ಆದರೆ ಒಂದು ಸ್ಮೆಕಲ್ ಕಾರ್ಖಾನೆಯನ್ನು ತುಮಕೂರಿನಲ್ಲಿ ಮಾಡ ಬೇಕೆಂಬ ಉದ್ದೇಶ ಇಟ್ಟುಕೊಂಡು ಅವಕ್ಕೆ ರಾ ಏರ್ಪಾಡು ಮಾಡಿದ್ದಂತಹ ನನ್ನ ವೇತ ಇರಲಿಲ್ಲವೆ? ಇನ್ನು ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆ ತಾಲೂಕುಗಳಲ್ಲಿ ರಾ ಮೆಟೀರಿಯಲ್ಸ್ ಸಿಕ್ಕುವುದರಿಂದ ಅಲ್ಲಿ ಕಾರ್ಖಾನೆ ಮಾಡುವುದಕ್ಕೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುವುದಿಲ್ಲವೇ?

† ಶ್ರೀ ಎಂ. ವೀರಪ್ಪ ಮೊಯಿಲಿ.— ತುಮಕೂರಿನಲ್ಲಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಯಾವುದೇ ಉದ್ಯಮವನ್ನು ಪ್ರಾರಂಭ ಮಾಡುವ ಉದ್ದಿಶ್ಯ ಸರ್ಕಾರಕ್ಕೆ ಇಲ್ಲ. ಅಲ್ಲಿ ಒಂದು ಫಂಕ್ಷನಲ್ ಇಂಡಸ್ಟ್ರಿಯಲ್ ಎಸ್ಟೇಟ್ ಫಾರ್ ಸ್ಮೆಕಲ್ ಇಂಡಸ್ಟ್ರೀಸ್ ಎಕ್ಸ್‌ಪರ್ಟ್ ಪ್ರಾಜೆಕ್ಟ್ ಮಾಡಬೇಕೆಂದು ಇದರ ಮೂಲಕ 12 ಘಟಕಗಳನ್ನು ಮಾಡಬೇಕೆಂದು ಪ್ರಾಜೆಕ್ಟ್‌ನ್ನು ತಯಾರು ಮಾಡುತ್ತಿದ್ದೇವೆ. ಆ ಯೋಜನೆ ಯಾವಯಾವ ರೀತಿ ಮಾಡಬೇಕೆನ್ನುವುದಕ್ಕೆ ಸ್ಟೀರಿಂಗ್ ಕಮಿಟಿ ಮಾಡಿ ಅದರಿಂದ ರಿಪೋರ್ಟ್ ತಯಾರಾಗಿದೆ. ಅದರ ರಿಪೋರ್ಟ್‌ನ್ನು ಸಿ.ಐ.ಟಿ. ಇನ್‌ಸ್ಟಿಟ್ಯೂಟ್‌ಗೆ ಟೆಕ್ನಿಕಲ್ ರಿಪೋರ್ಟ್‌ಗೆ ಕಳುಹಿಸಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ತುಮಕೂರು ಜಿಲ್ಲೆಯಲ್ಲಿ ಕಬ್ಬಿಣದ ಅದಿರು ಸಿಕ್ಕುತ್ತೆ, ತೆಂಗಿನ ನಾರಿನ ಉತ್ಪಾದನೆ ಮಾಡತಕ್ಕಂಥ ತಿಪಟೂರು ಮತ್ತು ತುರುವೇಕೆರೆ ಹಾಗೂ ಸಿರಾ ತಾಲೂಕುಗಳಲ್ಲಿ ಸಂಘ ಸಂಸ್ಥೆಗಳನ್ನು ಮಾಡಿ ರಿಜಿಸ್ಟರ್ ಮಾಡಿದ್ದಾರೆ. ಇಂತಹ ರಾ ಮೆಟೀರಿಯಲ್ಸ್‌ಗಳು ಸಿಕ್ಕುವ ಕಡೆ ಹಾಗೂ ಸಿರಾ, ಮಧುಗಿರಿಯಲ್ಲಿ ವನಸ್ಪತಿಗಳನ್ನು ತಯಾರು ಮಾಡುವುದಕ್ಕೆ ಸಾಕಷ್ಟು ಅನುಕೂಲಗಳಿವೆ. ಆದ್ದರಿಂದ ಇವೆಲ್ಲವನ್ನೂ ಉಪಯೋಗಿಸಿಕೊಂಡು ಕೆಲವು ಕಾರ್ಖಾನೆಗಳನ್ನು ಮಾಡಬೇಕೆಂದು ಅನೇಕ ಸಂದರ್ಭಗಳಲ್ಲಿ ನಿರ್ಣಯಗಳನ್ನು ಮಾಡಿಲ್ಲವೇ? ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕೆಂದು ಈ ಯೋಜನೆಯ ಬಗ್ಗೆ ಅನೇಕಸಾರಿ ಮಾತನಾಡಿದ್ದೇವೆ ಈ ಬಗ್ಗೆ ಏನಾದರೂ ಕಾರ್ಯಕ್ರಮ ಕೈಕೊಂಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ತುಮಕೂರಿನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿಕ್ಕೆ ಸಾಕಷ್ಟು ಅವಕಾಶಗಳು ಇವೆ, ಜೊತೆಗೆ ರೂರಲ್ ಇಂಡಸ್ಟ್ರಿಯಲ್ ಪ್ರಾಜೆಕ್ಟ್‌ನ್ನು ಮಾಡ ಬೇಕೆನ್ನುವ ವಿಷಯ ಕೇಂದ್ರ ಸರ್ಕಾರದ ಪರಿಮಿತಿಯಲ್ಲಿ ಟೆಕ್ನಿಕಲ್ ಎಕಾನಾಮಿಕ್ ಸರ್ವೆ ಮಾಡಿ 38 ಘಟಕಗಳನ್ನು ಸ್ಥಾಪನೆ ಮಾಡಬಹುದು ಎಂದು ಹೇಳಿದ್ದಾರೆ ಅದಕ್ಕೆ ನಾವು ಕೂಡ ಸಾಕಷ್ಟು ಪ್ರೋತ್ಸಾಹ ಕೊಟ್ಟಿದ್ದೇವೆ. ಅಲ್ಲಿ ಸಾಕಷ್ಟು ಕೈಗಾರಿಕೆಗಳು ಬರುವುದರಲ್ಲಿವೆ ತಾವು ಹೇಳಿದ ಹಾಗೆ ಕಬ್ಬಿಣದ ಅದಿರು ಹಾಗೂ ತೆಂಗಿನ ನಾರು ಸಿಕ್ಕುವುದರಿಂದ ಅದನ್ನು ಉಪಯೋಗಿಸಿಕೊಂಡು ಯಾರಾದರೂ ಎಂಟರ್ ಪ್ರಿನರ್ಸ್ ಮುಂದೆ ಬಂದರೆ ಸರ್ಕಾರ ಅವರಿಗೆ ಸಹಾಯ ಮತ್ತು ಸಹಕಾರ ಕೊಡಲಿಕ್ಕೆ ತಯಾರಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ,—ಪ್ರೈವೇಟ್ ಸೆಕ್ಟಾರ್‌ನಲ್ಲಿ ಯಾರೂ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ. ಪ್ರೈವೇಟ್ ಸೆಕ್ಟಾರ್‌ನಲ್ಲಿ ಬರುವುದು ಬಹಳ ಕಷ್ಟ ಅದರಿಂದಲೇ ಇಲ್ಲಿಯ ತನಕ ಯಾರು ಬಂದಿಲ್ಲ. ಆದ್ದರಿಂದ ಸರ್ಕಾರದವರೇ ಪಬ್ಲಿಕ್ ಸೆಕ್ಟಾರ್‌ನಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ನಮ್ಮ ಪ್ರತಿಯೊಂದು ತಾಲ್ಲೂಕಿನಲ್ಲಿ ಸಿಕ್ಕುವ ರಾ ಮೆಟೀರಿಯಲ್ಸ್ ಉಪಯೋಗಿಸಿಕೊಂಡು ಕೈಗಾರಿಕೆ ಮಾಡುವುದಕ್ಕೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ—ಸರ್ಕಾರ ಸಣ್ಣ ಕೈಗಾರಿಕೆಗಳನ್ನು ಯಾರಾದರೂ ಮಾಡು ವವರು ಇದ್ದರೆ ಅವರಿಗೆ ಬೇಕಾದ ಸಹಾಯ ಮಾಡುವುದಕ್ಕೆ ತಯಾರಿದೆ. ಕಾರಣವಾದರೂ ಇಷ್ಟೆ. ತುಮಕೂರು ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯನ್ನಾಗಿ ತಿಳಿದು ಅಲ್ಲಿ ಸಿಕ್ಕತಕ್ಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಯನ್ನು ಸ್ಥಾಪಿಸುವುದಕ್ಕೆ ಯಾರೇ ಎಂಟರ್‌ಪ್ರಿನರ್ಸ್ ಮುಂದೆ ಬಂದರೆ ಅವರಿಗೆ ಏನು ಸಹಾಯ ಮಾಡಲಿಕ್ಕೆ ಸಾಧ್ಯ ಅದನ್ನು ಸರ್ಕಾರ ಮಾಡಬಹುದು. ಸರ್ಕಾರ ಮಾತ್ರ ಯಾವ ಕೈಗಾರಿಕೆಯನ್ನು ಸ್ಥಾಪಿಸುವ ಯೋಚನೆಯಲ್ಲ.

†Indicates that remarks or speeches have not been revised by the member concerned.